ಮುಖಪುಟ ಭಿನ್ನವಾಗಿತ್ತು. ಎಲ್ಲ ಕತೆಗಳೂ ಮನರಂಜಿಸಿದವು. ರಹಮತ್ ತರೀಕೆರೆ ಅವರ ಲಲಿತ ಪ್ರಬಂಧ, 'ನಾವೂ ನಾಯಿ ಸಾಕಿದೆವು' ಮತ್ತು ಮೊಪಾಸನ ಹಾಸ್ಯ ಕತೆ 'ಟೊಂಯಾ ಮರಿ ಮಾಡಿದ್ದು' ಓದಿ ಸಾಕಷ್ಟು ನಕ್ಕೆವು.

**ಮೋಹನಕುಮಾರ್ ಬಿ.ಎಸ್., ಶಿರಾ**

'ನವಿಲುಗರಿ'ಯಲ್ಲಿ ಪ್ರಕಟವಾದ 'ಮನು' ಅವರ ಕಥೆ 'ಹೋಮಕುಂಡ' ಮನಕಲಕಿತು. ಭಕ್ತಿಯ ಪರಾಕಾಷ್ಠೆ, ಜೀವನದ ಮೇಲಿನ ವ್ಯಾಮೋಹ, ದೇವರ ನಂಬಿಕೆಯ ಈ ಕತೆ ಬದುಕಿನ ಬಗ್ಗೆ ಹೊಸ ಪಾಠಗಳನ್ನೇ ಕಲಿಸಿದೆ. ಇಂದಿನ ಬರಹಗಾರರಿಗೆ ಈ ಕತೆ ಮಾದರಿ.

**ಎಚ್.ಎಸ್. ಸತ್ಯನಾರಾಯಣರಾವ್, ಆರಕಲವಾಡಿ**

'ರಂಗವಿಹಂಗಮ'ದಲ್ಲಿ ಜಗನ್ನಾಥ್ ಪ್ರಕಾಶ್ ಅವರ 'ಅಪ್ರತಿಮ ಕಲಾವಿದೆ ಲಲಿತಾ' ಮನಸೂರೆಗೊಂಡಿತು. ಎರಡು ದಶಕಗಳ ಕಾಲ ಚಿತ್ರರಂಗ, ರಂಗಭೂಮಿಗಳಲ್ಲಿ ಮಿಂಚಿದ ಬಳ್ಳಾರಿ ಲಲಿತಾ ಅವರ ಪ್ರತಿಭೆ ಅದ್ಭುತವಾದದ್ದು.

**ಅಮೃತೇಶ್ವರ ತಂಡರ, ಅಣ್ಣಿಗೇರಿ**

'ಎಲ್ಲಿ ಕಳೆಯಿತೋ ಅಲ್ಲೇ ಹುಡುಕಿ!' (ಎಸ್. ಸೂರ್ಯಪ್ರಕಾಶ ಪಂಡಿತ್) ಲೇಖನ ಸರಳ ಭಾಷೆ, ಸುಲಲಿತ ನಿರೂಪಣೆಯಿಂದ ಗಹನವಾದ ವಿಷಯಗಳನ್ನು ಸುಲಭವಾಗಿ ಮನಸ್ಸಿಗೆ ನಾಟುವಂತೆ ಮಾಡಿದೆ.

**ಹೊ.ನಾ. ಲಲಿತ, ಬೆಂಗಳೂರು**

'ಎಲ್ಲಿ ಕಳೆಯಿತೋ ಅಲ್ಲೇ ಹುಡುಕಿ' ಲೇಖನ ಆಧ್ಯಾತ್ಮಿಕ ಸಾಧಕರಿಗೂ ಅನುಭಾವಿಗಳಿಗೂ ಸರಳ ಮಾರ್ಗದರ್ಶನ ಕೊಡುತ್ತದೆ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**




ಬನವಾಸಿ ವೆಂಕಟೇಶ ದೀಕ್ಷಿತ್‌ರ 'ಬಯಲ ಬಾಗಿಲ...' ಕತೆ ಮನೋಜ್ಞವಾಗಿದೆ.

**ಮೋಹನ ರು. ಹಣಗಿ, ಅಮೀನಗಡ**

ಸುನಂದಾ ಪ್ರಕಾಶ ಕಡಮೆ ಅವರ ಕತೆ 'ನೀಲಮಣಿಗಳ ಮಾಲೆ' ಓದಿದಾಗ ಅದರಲ್ಲಿನ ಪ್ರತಿ ಶಬ್ದವೂ ನನಗೆ ಆದ ಅನುಭವವನ್ನೇ ಪ್ರಕಟಿಸಿದೆ ಎನಿಸಿತು.

**ಬಸವರಾಜ ವಸ್ತ್ರದ, ಧಾರವಾಡ**

ವಸುಧೇಂದ್ರ ಅವರ 'ನಿಯಮಬಾಹಿರ', ಗೋಪೀನಾಥ ರಾವ್ ಅವರ 'ಜಾಣ್ಮೆ' ಕತೆಗಳು ಕಂಪೆನಿಗಳ ಒಳಜಗತ್ತನ್ನು ಪರಿಣಾಮಕಾರಿಯಾಗಿ ಚಿತ್ರಿಸಿವೆ. ನಾಗರಾಜ ವಸ್ತಾರೆ ಅವರ 'ನಾಸದೀಯವೆಂಬ ಸೂಕ್ತ' ಕತೆ ವಾಸ್ತವಿಕ ಜಗತ್ತಿನ ವ್ಯಾವಹಾರಿಕ ದೃಷ್ಟಿಯನ್ನು ನಿಚ್ಚಳವಾಗಿ ತೋರಿಸಿದೆ.

**ಎಂ.ಎಸ್. ರಮೇಶ್, ಪುತ್ತೂರು**

ನಾವು ಯಾರಿಂದ ಏನು ನಿರೀಕ್ಷಿಸಿದರೂ ಈ ಕಾಲದಲ್ಲಿ ದಕ್ಕದು. ಹೀಗಿರುವಾಗ ಎಲ್ಲಿಂದಲೊ ಬಂದ ವೃದ್ಧರಿಗೆ ದೂರದ ಸಂಬಂಧಿಯೊಬ್ಬ ನೆರವಾದ ಪರಿಯನ್ನು ಮ.ಸೊ. ಹಾಲಸ್ವಾಮಿ ಅವರ 'ಆಪದ್ಬಾಂಧವ' ಕತೆ ಸೊಗಸಾಗಿ ವಿವರಿಸಿದೆ.

**ಸಹನಾ ಎಸ್.ಕೆ., ಬೆಂಗಳೂರು**